ಸಲುವಾಗಿ ಹೋರಾಟ ಮಾಡುತ್ತಲೆ ಇರುತ್ತಾರೆ. ಈ ಯೋಜನೆಯನ್ನು ಮಾಡಿದರೆ ಒಂದು ಪರ್ಮನೆಂಟ್ ಪರಿಹಾರವನ್ನು ಒದಗಿಸಿದಂತಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂಥ ವಿಚಾರ ನಿಜವಿರುತ್ತದೆ. ಈ ಯೋಜನೆಯ ಸಲುವಾಗಿ ಹೋರಾಟ ಮಾಡಿದಂಥ ಸ್ವಾತಂತ್ರ ಹೋರಾಟಗಾರರು ಎಷ್ಟೋ ಜನರು ತೀರಿಕೊಂಡಿರುತ್ತಾರೆ. ಉಳಿದವರು ತೀರಿಕೊಳ್ಳುತ್ತಾರೆ ಎನ್ನುವ ಪರಿಸ್ಥಿತಿಗೆ ಹೋಗಿರುತ್ತಾರೆ. ಸ್ವಾತಂತ್ರ ಹೋರಾಟಗಾರರು ನನ್ನ ಹತ್ತಿರ ಬಂದಿದ್ದರು. ಅವರು ಬಹಳವಾಗಿ ಒತ್ತಾಯ ಮಾಡಿರುತ್ತಾರೆ ಈ ಯೋಜನೆಯು ಮೊದನೆಯ ಸ್ಟೇಜಿಗೂ ಸೇರಿಲ್ಲ, ಸೆಕೆಂಡ್ ಸ್ಟೇಜಿಗೂ ಸೇರಿಲ್ಲ, ಈಗ ಸೆಕೆಂಡ್ ಸ್ಟೇಜ್‌ಗೆ ಸೇರಿಸಿ ಈ ಕೆಲಸವನ್ನು ಕೈಗೊಳ್ಳಬೇಕೆಂದು ಇದ್ದೇವೆ. ಒಂದು ಮಾತ್ರ ಒಪ್ಪಿ ಕೊಳ್ಳಬೇಕಾದರೆ ಅವರ್ ಕೃಷ್ಣ ಯೋಜನೆಯನ್ನು ಮಾಡಿದ್ದರಿಂದ ಬಿಜಾಪುರ ಜಿಲ್ಲೆಗೆ ಅಧ್ಯಾಯ ವಾಗಿರುತ್ತದೆ. ಹೆಚ್ಚಿನ ಲಾಭವನ್ನು ಪಡೆದುಕೊಂಡವರು ಎಂದರೆ ಮಾನ್ಯ ಸದಸ್ಯರಾದ ಧರ್ಮಸಿಂಗ್ ಕಡೆಯವರು. ಈ ಲಿಫ್ಟ್ ಇರಿಗೇಷನ್ ಮಾಡಿದರೆ ಸುಮಾರು ಐದೂವರೆ ಲಕ್ಷ ಎಕರೆ ನೀರನ್ನು ಒದಗಿಸಲು ಸಾಧ್ಯವಾಗಿ ವ್ಯವಸಾಯಕ್ಕೆ ಅನುಕೂಲವಾಗುತ್ತದೆಂದು ಸರ್ಕಾರಕ್ಕೂ ಗೊತ್ತಿರುತ್ತದೆ. ಸರ್ಕಾರಕ್ಕೂ ಕೂಡ ಆಸಕ್ತಿ ಇರುತ್ತದೆ. ಆದಕ್ಕಾಗಿ ಸೆಕೆಂಡ್ ಸ್ಟೇಜಿಗೆ ಸೇರಿಸುವ ಬದಲಾಗಿ ಬೇರೆ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವೇ ಎನ್ನುವ ಬಗ್ಗೆ ಯೋಚನೆ ಮಾಡುತ್ತೇನೆಂದು ಇಷ್ಟೂ ಮಾತ್ರ ಹೇಳುತ್ತೇವೆ.

ಏತ ನೀರಾವರಿ ಯೋಜನೆಗಳ ಬಗ್ಗೆ

೧೦೨೬. ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ತಾಲ್ಲೂಕಿನ ಸಲುವಾಗಿ ಮತ್ತು ಮಾಕನೂರು ಗ್ರಾಮಗಳಲ್ಲಿ ಏತ ನೀರಾವರಿ ಯೋಜನೆಗಳಿಗಾಗಿ ಇನ್ವೆಸ್ಟಿಗೇಷನ್ ನಡೆಸಿ ಅಂದಾಜುಗಳನ್ನು ತಯಾರಿಸಲು ಯಾವುದಾದರೂ ಪ್ರಸ್ತಾಪವು ಸರ್ಕಾರದ ಮುಂದಿದೆಯೇ?

ಆ) ಹಾಗಾದರೆ ಅವು ಕಾರ್ಯಸಾಧುವೆಂದು ಕಂಡು ಬಂದಿದೆಯೇ?

ಇ) ಹಾಗಿದ್ದಲ್ಲಿ ಯೋಜನೆಗಳ ಒಟ್ಟು ಅಂದಾಜು ಪೊತ್ತೆ?

ಈ) ಅವುಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಉ) ಈ ಯೋಜನೆಗಳಿಂದ ನೀರಾವರಿ ಆಗುವ ಒಟ್ಟು ವಿಸ್ತೀರ್ಣವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು,

ಆ) ಇನ್ನೂ ಅನ್ವೇಷಣೆಯಲ್ಲಿವೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಕೆ. ಬಿ. ಕೋಳೀವಾಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಿಗೆ ಅಧಿಕಾರಿಗಳು ಕೊಡುವ ಮಾಹಿತಿಯನ್ನು ನೋಡಿದರೆ ವ್ಯಸನವಾಗುತ್ತದೆ. ಇಲ್ಲಿ ಎರಡು ಏತ ನೀರಾವರಿ ಯೋಜನೆಗಳಿಗೆ ಸಾಧ್ಯತೆ ಇದೆ ಎಷ್ಟೆಷ್ಟು ಮಾಹಿತಿ ನನ್ನ ಹತ್ತಿರ ಇದೆ.

ಅಧ್ಯಕ್ಷರು.—ಇದ್ದರೆ ಕಳಿಸಿಕೊಡಿ.

ಶ್ರೀ ಕೆ. ಬಿ. ಕೋಳೀವಾಡ.—ನಮ್ಮ ತಾಲ್ಲೂಕಿಗೆ ಬರಗಾಲ ಕಳೆದ ಹನ್ನೆರಡು ವರ್ಷಗಳಿಂದಲೂ ಇದೆ. ಈಗ ಇಲ್ಲಿ ರಸ್ತೆ ಕಾಮಗಾರಿಗಳು ಬಂದ್ ಆಗಿದೆ, ಪರಿಹಾರ ಕಾಮಗಾರಿಗಳನ್ನು ತೆಗೆದು

ಕೊಂಡಿರುವುದೂ ಸಹ ಬಂದ್ ಆಗಿದೆ. ಕನಿಷ್ಟ ಪಕ್ಷ ೩-೪ ಏತ ನೀರಾವರಿ ಯೋಜನೆಗಳನ್ನು ಮಾಡಿದರೆ ಕ್ಷಾಮ ಪರಿಸ್ಥಿತಿ ಕಡಿಮೆಯಾಗಬಹುದೆಂದು, ಇದೂ ಅಲ್ಲದೆ. ನಮ್ಮಲ್ಲಿ ತುಂಗಭದ್ರಾನಾಲೆ ಹೆಚ್ಚು ಪ್ರದೇಶದಲ್ಲಿ ಹರಿಯಬಹುದಾದಂಥ ಅವಕಾಶವಿದ್ದು ಇದೆ. ಆದ್ದರಿಂದ ೧೪ ಏತನೀರಾವರಿ ಯೋಜನೆಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವೆಲ್ಲವನ್ನೂ ಕೂಡ ಸೇರಿಸಿ ಒಂದು ಮಾಸ್ಟರ್ ಪ್ಲಾನ್ ಮಾಡಿ ಕೇಂದ್ರ ಸರ್ಕಾರದ ಸಹಾಯ ಪಡೆಯಲಿಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ, ಇದನ್ನು ಮಾಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಶ್ರೀಮಾನ್ ಕೋಳೀವಾಡ ಅವರು ಇದಕ್ಕೆ ಪ್ರತ್ಯೇಕವಾದ ಮಾಸ್ಟರ್‌ಪ್ಲಾನ್ ಮಾಡಿ ಕೇಂದ್ರದ ಸಹಾಯ ಪಡೆಯಲಿಕ್ಕೆ ಹೇಳಿದ್ದಾರೆ. ಹೋದ ಸಾರಿಯೂ ಅವರು ಇದನ್ನು ಕೇಳಿದ್ದರು. ಆದರೆ ಕೇಂದ್ರದವರಂ ಇದಕ್ಕೆ ಪ್ರತ್ಯೇಕವಾಗಿ ಹಣ ಕೊಡುವುದಿಲ್ಲ. ಮೂಲಕ ನೂರಿನದ್ದು ಎರೆಡು ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ಸೌಕರ್ಯ ಕೊಡಲು ಸಾಧ್ಯವೆಂದು, ೫೦ ಲಕ್ಷ ಖರ್ಚಾಗುತ್ತದೆ. ಎಂದು ಎಸ್ಟಿಮೇಟ್ ಮಾಡಿ ಕಳಿಸಿದ್ದೇವೆ ನೆಲವಾಗಿಲಿನದ್ದು ಎಸ್ಟಿಮೇಟ್ ಮಾಡಿಲ್ಲ. ನನಗೆ ಗೊತ್ತು, ನೀವು ಅಧಿಕಾರಿಗಳ ಹತ್ತಿರ ಹೋಗಿ ವಿಷಯವನ್ನು ತಿಳಿದುಕೊಂಡು ಆದರ ಮೇಲೆ ಇಲ್ಲಿ ಪ್ರಶ್ನೆ ಹಾಕುತ್ತಿದ್ದೀರಿ. ಆದರೆ ಸದಸ್ಯ ಪರಿಸ್ಥಿತಿಯಲ್ಲಿ ಇದನ್ನು ಮಾಡುತ್ತೇನೆ ಎಂದು ಹೇಳಲಿಕ್ಕೆ ನನಗೆ ಶಕ್ತಿ ಇಲ್ಲ. ಇವತ್ತಿನ ಆರ್ಥಿಕ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಯಾವುದೇ ಕಮಿಟ್‌ಮೆಂಟ್ ಮಾಡಿಕೊಳ್ಳುವುದು ಸಾಧ್ಯವಿಲ್ಲ.

ಶ್ರೀ ಕೆ. ಬಿ. ಕೋಳೀವಾಡ.—೨೦ ಅಂಶಗಳ ಕಾರ್ಯಕ್ರಮದಲ್ಲಿ ಇರಿಗೇಶನ್ ಪೊಟೆನ್‌ಶಿಯಲ್ ಕ್ರಿಯೇಟ್ ಮಾಡುವುದಕ್ಕೆ ಪ್ರಾಶಸ್ತ್ಯ ಇದೆ. ಕೇಂದ್ರ ಸರ್ಕಾರ ಇದಕ್ಕೆ ಸಹಾಯ ಮಾಡುತ್ತದೆ. ಇದು ಒಳ್ಳೆಯ ಉದ್ದೇಶ ಇರುವುದರಿಂದ ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—೨೦ ಅಂಶ ಕಾರ್ಯಕ್ರಮದಲ್ಲಿ ಇದಕ್ಕೆ ಆದ್ಯತೆ ಕೊಡಬೇಕೆಂದು ಎಲ್ಲರ ಭಾವನೆಯೂ ಹಾಗೆ ಇದೆ. ಆದರೆ ಇದಕ್ಕೆ ಆದ್ಯತೆ ಬರುವುದಿಲ್ಲ.

ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಶಿಂಷಾ ನದಿಗೆ ಕಟ್ಟಿರುವ ಸೇತುವೆ ದುರಸ್ತಿ ಬಗ್ಗೆ.

೧೨೦೧ ಶ್ರೀ ಬಿ: ಅಪ್ಪಾಜಿಗೌಡ(ಮದ್ದೂರು),—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ಸುಮಾರು ೧೦೦ ವರ್ಷಗಳ ಹಿಂದೆ ಕಟ್ಟಿರುವ ಸೇತುವೆ ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಅದರ ಬಗ್ಗೆ ಸರ್ಕಾರದವರು ಏನು ಪರ್ಯಾಯ ವ್ಯವಸ್ಥೆ ಮಾಡಿದ್ದಾರೆ. ?

ಇ) ಹಾಗಿಲ್ಲದಿದ್ದಲ್ಲಿ, ಯಾವಾಗ ಮಾಡಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) —

ಅ) ಈ ಸೇತುವೆ ಶಿಥಿಲವಾಗಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ-—ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಈ ಸೇತುವೆ ಇದೆ, ಇದು ಸಿಂಗಲ್ ಲೈನ್ ಬ್ರಿಡ್ಜ್ ಇದ್ದು ಹೆವಿ ಟ್ರಾಫಿಕ್ ಇದೆ. ಹಿಂದೆ ಇದನ್ನು ಕಟ್ಟಿಸುವಾಗ ಇಷ್ಟು ಟ್ರಾಫಿಕ್ ಜಾಸ್ತಿಯಾಗುತ್ತದೆಂದು ಆಲೋಚನೆ ಮಾಡಿರಲಿಲ್ಲ. ಈಗ ಇದನ್ನು ಡಬಲ್ ಲೈನ್ ಆಗಿ ಮಾಡಬೇಕಾದರೆ ೬೫ ಲಕ್ಷ ರೂಪಾಯಿ ಖರ್ಚಾಗುತ್ತದೆ. E and I ಫಂಡ್‌ನಿಂದ ಹಣ ಕೊಡುವರೆತ ಕೇಂದ್ರ ಸರ್ಕಾರಕ್ಕೆ ಈಗಾಗಲೇ ೫೦-೫೫-೫೫ರಲ್ಲಿ ಎಸ್ಟಿಮೇಂಟ್‌ನ್ನು ಕಳುಹಿಸಿ ಕೊಟ್ಟಿದೆ ನೆ,